
ಮನೆಯ ವೈಶಿಷ್ಟ್ಯವನ್ನೂ ಕಾಪಾಡಿಕೊಳ್ಳುವ ಪ್ರಕ್ರಿಯೆಯೇ ಭಾಷೆ ಸಂಸ್ಕೃತಿಯೊಂದಿಗೆ ನಮ್ಮ ಅನುಸಂಧಾನವಾಗಿದೆ. ಸಂಸ್ಕೃತಿಯನ್ನು ಒಂದು ಭೂಪ್ರದೇಶದ ಸರಹದ್ದುಗಳಲ್ಲಿ ಕಟ್ಟಿಡುವುದು ಸಾಧ್ಯವಿಲ್ಲವೆಂದೂ, ಆ ಸರಹದ್ದುಗಳು ಕಾಲಕಾಲಕ್ಕೆ ತಮ್ಮ ವ್ಯಾಪಕತೆಯನ್ನು ಬದಲಾಯಿಸಿಕೊಳ್ಳುತ್ತವೆ ಎಂದೂ ಕುಂದೇರಾ ವಾದಿಸುತ್ತಾನೆ. ಆದರೂ ಅದಕ್ಕೊಂದು ಸಂದರ್ಭ ಬೇಕು. ಪ್ರಾಗ್‌ನಲ್ಲಿ 14ನೇ ಶತಮಾನದಲ್ಲಿ, ಭಿನ್ನ ಭಾಷೆ ಮತ್ತು ರಾಷ್ಟ್ರೀಯತೆಯ ಪ್ರೊಫೆಸರುಗಳನ್ನು ಚಾರ್ಲ್ಸ್ ವಿಶ್ವವಿದ್ಯಾಲಯ ನೇಮಕ ಮಾಡಿಕೊಂಡಿತ್ತು. ಆ ವಿಶ್ವವಿದ್ಯಾಲಯದಲ್ಲಿ ಬೈಬಲ್‌ನ ಮೊದಲ ಹಂಗೇರಿಯನ್ ಮತ್ತು ರೊಮೇನಿಯನ್ ಅನುವಾದಗಳಾದವು. ಹಾಗೇ ಹೈದರಾಬಾದಿನಲ್ಲಿ ಮೀರ್ ಉಸ್ಮಾನ್ ಅಲಿಯ ಆಳ್ವಿಕೆಯಲ್ಲಿ, 'ದರ್-ಉಲ್-ತರ್ಜುಮಾ' ಸಂಸ್ಥೆಯಲ್ಲಿ ಕುರಾನಿನ ಇಂಗ್ಲೀಷ್ ಅನುವಾದವನ್ನು ಕೈಗೊಳ್ಳಲಾಗಿತ್ತು. ಇದು ಬಾಗಿಲು ಕಿಟಕಿಗಳ ಮಾತು.

ಚೆಕ್ ಭಾಷೆ ಸಂಸ್ಕೃತಿಯ ಬಗ್ಗೆ ತಾದಾತ್ಮ್ಯದಿಂದ ಮಾತನಾಡಿದ ಕುಂದೇರಾ ಎಡಪಂಥೀಯ ರಾಜಕೀಯ ಮತ್ತು ರಷ್ಯಾದ ದಬ್ಬಾಳಿಕೆಯ ನಿರಂಕುಶತೆಯ ವಿರುದ್ಧ ದನಿಯೆತ್ತಿದ್ದ. ಒಬ್ಬ ಬುದ್ಧಿಜೀವಿಯಾಗಿ ಭಿನ್ನಮತವನ್ನು ವ್ಯಕ್ತಪಡಿಸುತ್ತ ಚೆಕೊಸ್ಲೊವೇಕಿಯಾದಲ್ಲಿ ಮುಂದುವರೆಯಬೇಕೆ ಅಥವಾ ಸೃಜನಶೀಲತೆಯನ್ನು ಪೋಷಿಸುವ ಭೂಪ್ರಾಂತಕ್ಕೆ ವಲಸೆ ಹೋಗಬೇಕೇ ಎನ್ನುವ ದ್ವಂದ್ವ ಅವನನ್ನು ಕಾಡಿರಲಿಕ್ಕೆ ಸಾಕು. ಕಡೆಗೂ 1975ರಲ್ಲಿ ಪ್ಯಾರಿಸ್ಸಿಗೆ ಸ್ಥಳಾಂತರಗೊಂಡ. ಚೆಕ್ ಭಾಷೆಯಲ್ಲಿ ಬರವಣಿಗೆ ಮುಂದುವರೆಸಿದ್ದ ಕುಂದೇರಾ 1985ರ ವೇಳೆಗೆ ಫ್ರೆಂಚ್ ಭಾಷೆಯ ಸಾಧ್ಯತೆಗಳನ್ನು ಶೋಧಿಸುತ್ತಾ, 1995ರ ವೇಳೆಗೆ ತನ್ನ ಭಾಷೆಯನ್ನು ಪೂರ್ತಿಯಾಗಿ ಫ್ರೆಂಚ್‌ಗೆ ಬದಲಾಯಿಸಿಕೊಂಡ. ಹೀಗೆ ಅವನು 1967ರ ಭಾಷಣದಲ್ಲಿ ಮಾಡಿದ್ದ ಭಾಷಣದ ಆಶಯಕ್ಕೆ ವಿರುದ್ಧವಾಗಿ ಬೇರೊಂದು ಭಾಷೆಯನ್ನೂ ಭೂಗೋಳವನ್ನೂ ತನ್ನದಾಗಿಸಿಕೊಂಡ.

ಹೀಗಾಗಿಯೇ 1983ರ ಪ್ರಬಂಧದ ಕ್ಯಾನ್ವಾಸು ವಿಸ್ತಾರಗೊಂಡು ಮಧ್ಯಯುರೋಪಿನ ಕಡೆಗೆ ಹೋಗುತ್ತದೆ. ಚೆಕ್ ಪ್ರಾಂತದೊಂದಿಗೆ ಪೋಲೆಂಡ್, ಹಂಗರಿಗಳ ಬಗ್ಗೆ ಮಾತಾಡುತ್ತಾನೆ. ಮಧ್ಯ ಯುರೋಪು




ಭೌಗೋಳಿಕವಾಗಿ ಮಧ್ಯದಲ್ಲಿದೆ. ಸಾಂಸ್ಕೃತಿಕವಾಗಿ ಪಶ್ಚಿಮದಲ್ಲಿದೆ. ರಾಜಕೀಯವಾಗಿ ಪೂರ್ವದಲ್ಲಿದೆ. ಈ ತುಮುಲಗಳನ್ನು ಅಲ್ಲಿನ ರಾಜಕೀಯ ಮತ್ತು ಸಾಂಸ್ಕೃತಿಕ ವಾತಾವರಣದಲ್ಲಿ ಪರಿಭಾಷಿಸಬೇಕು.

ಒಂದು ಸಂಸ್ಕೃತಿ ಮತ್ತು ಭಾಷೆ ಬೆಳೆಯಲು ಮುಕ್ತ ವಾತಾವರಣವಿರಬೇಕು. 1967ರ ಭಾಷಣದಲ್ಲಿ ಅಭಿವ್ಯಕ್ತಿಯ ಸ್ವಾತಂತ್ರ್ಯದ ಬಗ್ಗೆ ಹೇಳುತ್ತಾ 'ಅಭಿವ್ಯಕ್ತಿಯ ಸ್ವಾತಂತ್ರ್ಯ ಅಂದಕೂಡಲೇ ಅದಕ್ಕೆ ಮಿತಿಗಳಿರಬೇಕು ಅನ್ನುತ್ತಾರೆ. ಹೌದು, ಮಿತಿಗಳು ಸಹಜವಾಗಿಯೇ ಉಂಟಾಗುತ್ತವೆ. ಆ ಮಿತಿಗಳನ್ನು ನಿರ್ಧರಿಸುವುದು ನಮ್ಮ ಜ್ಞಾನದ ಆಳ, ಪೂರ್ವಗ್ರಹದ ಅಗಲ, ವಿದ್ಯೆಯ ಸ್ತರ, ಹೀಗೆ' – ಅಂದರೆ, ಹೊರಗಿನಿಂದ ಹೇರಿದ ಮಿತಿಗಳಿಗಿಂತ ಮಾನವನಲ್ಲಿ ಅಡಕವಾಗಿರುವ ಮಿತಿಗಳೇ ಸಹಜವಾಗಿ ಇರುತ್ತವೆ ಎನ್ನುವುದು ಅವನ ವಾದ.

ಮಧ್ಯ ಯೂರೋಪು ನಮಗೆ ಪ್ರಸ್ತುತವೆನ್ನಿಸುವುದು ಅದರ ಭಾಷಾ ವೈವಿಧ್ಯದಿಂದ ಹಾಗೂ ಇತರ ಭಾಷೆಗಳ ದಾಳಿಯನ್ನು ತಡೆದು ನಿಲ್ಲುವ ಪ್ರಯತ್ನ ಮಾಡುವುದರಿಂದ. ಮಧ್ಯ ಯೂರೋಪಿನ ಸುತ್ತಲೂ